C.C. 1560/21
PW 1

<u>ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ</u>

<u>ಸಿ ಸಿ ನಂಃ **1560/21**</u>

ಸಾಕ್ಷಿಯ ಹೆಸರುಃ ಸೌಮ್ಯ ಡಿ ಎಸ್ | ಪ್ರಾಸಾ ಃ 1
ತಂದೆ /ಗಂಡನ ಹೆಸರು ಃ ಎ ಮೈಲಾರಿ | ಚಾಸಾ ಃ 1

ವಯಸ್ಸು ಃ 41

ಉದ್ಯೋಗ ಃ ಗೃಹಿಣಿ

ವಾಸ ಸ್ಥಳ ಃ ಮೂಡುಬಿದರೆ

ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **29.06.2024**

ಕಲಂ 299 ಸಿ ಆರ್ ಪಿ ಸಿ ಅಡಿಯಲ್ಲಿ ಸಾಕ್ಷಿಯ ಹೇಳಿಕೆ

ದಿಃ 02.12.2001 ರಂದು ಕುಶಾಲನಗರದ ಕಾಳೇಘಾಟ್ ಕಲ್ಯಾಣ ಮಂಟಪದಲ್ಲಿ ನನಗೂ ಮತ್ತು 1 ನೇ ಆರೋಪಿಗೆ ವಿವಾಹವಾಗಿರುತ್ತದೆ. ಸದ್ರಿ ವಿವಾಹವನ್ನು ಗುರು ಹಿರಿಯರು ನೋಡಿ ನಿಶ್ಚಯಿಸಿರುತ್ತಾರೆ. ಸದ್ರಿ ವಿವಾಹದಿಂದ ನಮಗೆ 2 ಹೆಣ್ಣು ಮಕ್ಕಳು ಜನಿಸಿರುತ್ತಾರೆ. ನನ್ನ ಅತ್ತೆಯಾದ 2 ನೇ ಆರೋಪಿಗೆ ನನ್ನನ್ನು ವಿವಾಹ ಮಾಡಿಕೊಳ್ಳುವುದು ಇಷ್ಟವಿರಲಿಲ್ಲ, ಮೊದಲನೆ ಆರೋಪಿ ಹಾಗೂ ನನ್ನ ಮಾವ ಒಪ್ಪಿ ನನ್ನನ್ನು ಮದುವೆ ಮಾಡಿಕೊಂಡಿರುತ್ತಾರೆ. ಮದುವೆಯಾಗಿ 4 ತಿಂಗಳಿನಿಂದಲೆ ನನ್ನ ಅತ್ತೆ ವರದಕ್ಷಿಣೆ ತರುವಂತೆ ಕಿರುಕುಳ ನೀಡಿರುತ್ತಾರೆ ಅಲ್ಲದೆ ನನಗೆ 2 ಹೆಣ್ಣು ಮಕ್ಕಳು ಜನಿಸಿದಾಗ, ಗಂಡು ಮಗು ಜನಿಸಿಲ್ಲ ಎಂದು ಕಿರುಕುಳ ನೀಡಿರುತ್ತಾರೆ.

ಅರಕಲಗೂಡಿನಲ್ಲಿ ನನ್ನ ಗಂಡನಿಗೆ ಸೇರಿದ ಮಾಲ್ತೇಶ್ವರ ಜವಳಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ರೇಖಾ ಎಂಬ ಆಕೆಯೊಂದಿಗೆ 1 ನೇ ಆರೋಪಿ ಅನೈತಿಕ ಸಂಬಂಧ ಇಟ್ಟುಕೊಂಡಿದ್ದು, ಅದು ನನಗೆ ತಿಳಿದು ಬಂದ ನಂತರ ನಾನು ಅವರ ವಿರುದ್ಧ ಅರಕಲಗೂಡು ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿರುತ್ತೇನೆ.

ಇರುವ ಭಾವಚಿತ್ರಗಳು, ವಿಚ್ಛೇದನಕ್ಕೆ ನೀಡಿದ ನೋಟಿಸ್‌ನ ಜೆರಾಕ್ಸ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಆ ಸಮಯದಲ್ಲಿ ನನ್ನೊಂದಿಗೆ ಸಾಕ್ಷಿದಾರರಾಗಿ ಬಂದವರ ಹೆಸರು ನನಗೆ ನೆನಪಿಲ್ಲ. ಸದರಿ ದಾಖಲೆಗಳನ್ನು ಮಹಜರಿನ ಮೂಲಕ ಪಡೆದಿದ್ದು ಆಗ ಸಮಯ ಮಧ್ಯಾಹ್ನ 2-00 ರಿಂದ 3-00 ಗಂಟೆಯಾಗಿರುತ್ತದೆ .

ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **1** ಎಂದು , ಸಾಕ್ಷಿಯ ಸಹಿಯನ್ನು ನಿಪಿ **1** ಎ ಎಂದು ಗುರುತಿಸಲಾಯಿತು.

ಅದೇ ಪ್ರಕರಣದಲ್ಲಿ ನಾನು ನಾಗಮಣಿ , ಮೈಲಾರಿ , ಗೋವಿಂದ , ನೀಲಕಂಠ ರವರ ವಿರುದ್ಧ ಸಹ ದೂರು ನೀಡಿರುತ್ತೇನೆ . ನಂತರ ನನ್ನ ಸೋದರಮಾವ ಲೋಕೇಶ್ ಗಣಪತಿ , ವಾಸುದೇವ್ ಹಾಗೂ ನನ್ನ ತಂದೆ ತಾಯಿಗಳು ರಾಜಿ ಮಾಡಿದ್ದರಿಂದ ಸದರಿ ಪ್ರಕರಣವನ್ನು ವಾಪಾಸ್ಸು ಪಡೆದಿರುತ್ತೇನೆ. ನಂತರ ನಾನು 1 ನೇ ಆರೋಪಿಯ ಮನೆಗೆ ಹೋದಾಗ ನನ್ನ ಅತ್ತೆ ಕೆಟ್ಟದಾಗಿ ಬೈದು ನನ್ನ ಗಂಡ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡುತ್ತಿದ್ದರು. ನಂತರ ನಾನು ನನ್ನ ಎರಡು ಮಕ್ಕಳನ್ನು ಕರೆದುಕೊಂಡು ಕುಶಾಲನಗರದಲ್ಲಿರುವ ನನ್ನ ತಂದೆಯ ಮನೆಗೆ ಹೋಗಿರುತ್ತೇನೆ. ನಂತರ ನನ್ನ ಗಂಡ ನ್ಯಾಯಾಲಯದ ಮೂಲಕ ವಿಚ್ಛೇದನೆಯ ನೋಟಿಸ್ ನೀಡಿರುತ್ತಾರೆ. ಆ ಬಗ್ಗೆ ನಾನು ನನ್ನ ಗಂಡನನ್ನು ವಿಚಾರಿಸಿದಾಗ ನೋಟಿಸು ತೆಗೆದುಕೋ ಆ ಪ್ರಕರಣವನ್ನು ನಾನು ವಾಪಾಸ್ಸು ಪಡೆಯುವುದಾಗಿ ತಿಳಿಸಿರುತ್ತಾರೆ . ನಾನು ನೋಟಿಸನ್ನು ಪಡೆದು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ . ಸದರಿ ಪ್ರಕರಣ ವಜಾ ಗೊಂಡಿರುತ್ತದೆ .

ನಂತರ ನನ್ನ ಗಂಡ ದಿ 05-04-2013 ರಲ್ಲಿ 3 ನೇ ಆರೋಪಿ ಸಿಂಧುವನ್ನು ಚಿಕ್ಕಮಗಳೂರಿನ ಕಾಮದೇನು ಮಹಾಗಣಪತಿ ದೇವಸ್ಥಾನದಲ್ಲಿ 2 ನೇ ಮದುವೆ ಮಾಡಿಕೊಂಡಿರುತ್ತಾರೆ . ನಂತರ ನಾನು ನನ್ನ ವಕೀಲರ ಮೂಲಕ ದಿ 12-11-2014 ರಂದು ಈ ದೂರನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ .

C.C. 1560/21
PW 1

ದಿ 29-11-2014 ರಂದು ಪೋಲಿಸರು ಕರೆ ಮಾಡಿ ಠಾಣೆಗೆ ಬರುವಂತೆ ತಿಳಿಸಿದ್ದು ಪೋಲಿಸರಿಗೆ ನಾನು ಹೇಳಿಕೆ ನೀಡಿರುತ್ತೇನೆ .

ದಿ 05-01-2015 ರಂದು ನಾನು ನನ್ನ ಮದುವೆಯ ಭಾವಚಿತ್ರ , 2 ನೇ ಆರೋಪಿ ಮತ್ತು ನನ್ನ ತಂದೆ ಇರುವಂತಹ ಭಾವಚಿತ್ರ, 4 ನೇ ಆರೋಪಿಯೊಂದಿಗೆ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರ ದ ನ್ಯಾ ದಂ, ಕುಶಾಲನಗರ.

C.C. 1560/21
PW 1

ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿನಾಂಕಃ **02.01.2024**

ಮುಖ್ಯ ವಿಚಾರಣೆಃ ಶ್ರೀ ಎಸ್ ಎಸ್. ಎಂ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಹಾಜರುಪಡಿಸಿದ್ದು, ಅದರಲ್ಲಿ ಬರೆದಿರುವುದು ಸತ್ಯವಿರುತ್ತದೆ. ನಾನೆ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ.

ವಂಶವೃಕ್ಷ ದೃಡೀಕರಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 1, ನಮೂನೆ 9 ಮತ್ತು 11 ರ ಯಥಾ ನಕಲು ನಿಪಿ 2 ಎಂದು, ವಂಶವೃಕ್ಷ ದೃಡೀಕರಣ ಪತ್ರದ ಯಥಾ ನಕಲನ್ನು ನಿಪಿ 3 ಎಂದು, ದಿನಾಂಕ 20.03.2021 ರಂದು ಮುಳ್ಳುಸೋಗೆ ಗ್ರಾಮ ಪಂಚಾಯಿತಿ ಅಧಿಕಾರಿಗೆ ಬರೆದ ಪತ್ರದ ಕಛೇರಿ ಪ್ರತಿಯನ್ನು ನಿಪಿ 4 ಎಂದು, ಪ್ರತಿವಾದಿಗಳಿಗೆ ನೀಡಿದ ನೋಟೀಸ್ಸಿನ ಕಛೇರಿ ಪ್ರತಿ ನಿಪಿ 5 ಎಂದು, ಜಾರಿಯಾಗದ ಅಂಚೆ ಲಕೋಟೆ ನಿಪಿ 6 ಎಂದು, ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅದರೊಳಗೆ ಇರುವ ನೋಟೀಸ್ಸನ್ನು ನಿಪಿ 6 ಎಂದು, ಮೂರು ಅಂಚೆ ರಶೀದಿಗಳನ್ನು ನಿಪಿ 7 ರಿಂದ ನಿಪಿ 9 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ 10 ಎಂದು, ,ಮುಳ್ಳುಸೋಗೆ ಗ್ರಾಮ ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳಿಗೆ ನೀಡಿದ ನೋಟೀಸ್ಸನ್ನು ನಿಪಿ 11 ಎಂದು , ಅಂಚೆ ರಶೀದಿಯನ್ನು ನಿಪಿ 12 ಎಂದು ಗುರುತಿಸಲಾಯಿತು.

ಈ ಕೇಸಿನಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ಪಾಟೀ ಸವಾಲು: ಪ್ರತಿವಾದಿ 1 ಎ, 1 ಸಿ, ಮತ್ತು 2 ರವರು ಏಕಪಕ್ಷೀಯ ಎಂದು ಪರಿಗಣಿಸಿದ್ದು, ಪ್ರತಿವಾದಿ 1 ಬಿ, 1 ಡಿ, 1 ಇ, 1 ಎಫ್ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ ದ ನ್ಯಾ ದಂ, ಕುಶಾಲನಗರ.

C.C. 1560/21
PW 1

C.C. 1560/21
PW 1